## ಮಾತೇ ಮುತ್ತು...

'ಮಾತು ಮುತ್ತು, ಮಾತೇ ಮುತ್ತು' (ಸ್ವಯಂಪ್ರಭಾ, ಫೆ. 17) ಮುತ್ತಿನಂಥ ಲೇಖನ. ಈಚೆಗೆ ಒಮ್ಮೆ ಪುಟ್ಟ ದೀಪಾಳ ಮಾತು ಕೇಳಿ ಅವರಮ್ಮ ಶಾಕ್ ಆದರು. ವಯಸ್ಸಿನಲ್ಲಿ ಸ್ವಲ್ಪ ದೊಡ್ಡವಳಾಗಿದ್ದ ದೀಪಾಳ ಅಕ್ಕನ ಗೆಳತಿ 'ನಿನಗೆ ಏನಾಗಬೇಕೆಂದು ಆಸೆ?' ಎಂದು ಕೇಳಿದಾಗ ದೀಪಾ, 'ಅಮ್ಮನಾಗಬೇಕು ಎಂದು ಆಸೆ' ಎಂದು ಹೇಳಿದಾಗ ಗೆಳತಿಯರೆಲ್ಲಾ ಗೊಳ್ಳೆಂದು ನಕ್ಕರು. ಸಾಲದ್ದಕ್ಕೆ 'ನಿಂಗೆ ಈಗಲೇ ಮಗು ಬೇಕೆಂದರೆ ಅಡಾಪ್ಟ್ ಮಾಡ್ಕೋಬೇಕು ಎಂದರು'. ದೀಪಾ ಸೀದಾ ಹೋದವಳೇ 'ಅಮ್ಮಾ, ಮಗು ಬೇಕೆಂದರೆ ಮಾರ್ಕೆಟ್‌ನಲ್ಲಿ ಸಿಗುತ್ತಾ? ಅಥವಾ ಕದಿಯಬೇಕಾ?' ಎಂದಾಗ ಅವರಮ್ಮ ದಂಗಾದರು.

—ನಿರುಕ್ತಾ

## ಡೈಮಂಡ್‌ಗೆ ಡಿಮಾಂಡು

'ಡೈಮಂಡ್‌ಗೆ ಡಿಮಾಂಡು' (ಯು. ಅನಂತ್, ಫೆ 17) ಲೇಖನ ಬಹಳವೇ ಮಾಹಿತಿ ಹೊತ್ತು ತಂದಿದೆ. ಮಲ್ಟಿ ಪರ್ಪಸ್ ಆಭರಣ ಮತ್ತು ಹೂವಿನಂತೆ ಅರಳುವ ಸೀಕ್ರೆಟ್ ರಿಂಗ್ ಬಗ್ಗೆ ಆಶ್ಚರ್ಯವೆನಿಸಿತು. ಇವುಗಳ ಚಿತ್ರವನ್ನೂ ಕೊಟ್ಟಿದ್ದರೆ ಚೆನ್ನಿತ್ತು. ಅನ್ ಕಟ್ ಡೈಮಂಡ್ ಆಭರಣಗಳೂ ಕೂಡಾ ಅವುಗಳದೇ ಸೌಂದರ್ಯ ಹೊಂದಿವೆ.

—ಸುಮನಾ

## ಸಾಬು ಭಾವ

'ಸಾಬು ಭಾವ' (ಸ್ಮಿತಾ ಅಮೃತರಾಜ್ ಸಂಪಾಜೆ, ಫೆ. 17) ಕಥೆ ಓದಿದೆ. ಒಂದು ವೇಳೆ ಮಣಿಯು ಸಾಬು ಭಾವನನ್ನು ಮದುವೆಯಾಗಿದ್ದರೆ ಗಂಡ ಹೆಂಡಿರಾಗುತ್ತಿದ್ದರು. ಆದರೆ ಆಗಲಿಲ್ಲ. ಸರಿ, ನಂತರ ಇಬ್ಬರೂ ಬೇರೆ ಬೇರೆಯವರನ್ನು ಮದುವೆಯಾದರು. ಮಣಿಗೆ ಹರಿಣಿ ರಾಗಿಣಿ ಹುಟ್ಟಿದರು. ಸಾಬು ಭಾವನಿಗೆ ಮಗ ಹುಟ್ಟಿ ರಾಗಿಣಿಯ ಜೊತೆಗೆ ಕೆಲಸ ಮಾಡುತ್ತಿದ್ದಾನೆ. ಆದರೆ ವರಸೆಯಲ್ಲಿ ಅಣ್ಣ ತಂಗಿಯರಾಗಬೇಕಲ್ಲ. ಅದು ಹೇಗೆ ಮದುವೆಯಾಗುತ್ತಾರೆ?

—ವಿಜಯ ಮಂಜುನಾಥ

## ಸಕುಂತ

'ಸಕುಂತ' (ಭಾರತಿ ಹಾದಿಗೆ, ಫೆ. 10) ಕಥೆ ಚೆನ್ನಾಗಿದೆ. ಶ್ರಾವಣ ಮಾಸದ ಸೊಬಗನ್ನು ವರ್ಣಿಸುತ್ತ ವಿಜಯಕ್ಕನಿಂದ ಪ್ರಾರಂಭವಾಗುವ ಕಥೆ ಓದಿಸಿಕೊಂಡು ಹೋಗುತ್ತದೆ. ಅತ್ತೆಯ ಆರೈಕೆಗೆ ಹೋದ ತಂಗಿ ಸಕುಂತ ತನ್ನ ಗಂಡನನ್ನು ಮದುವೆಯಾಗೋದು ವಿಜಯಾಳಿಗೆ ಆಘಾತವೆನಿಸಿದರೂ ಕರುಳ ಸಂಬಂಧಗಳು ತಪ್ಪುಗಳೆಸಗಿದ್ದವರನ್ನೂ ಸಹ ಬಿಡದು ಎಂಬ ವಾಸ್ತವ ಸತ್ಯ ಅನಾವರಣಗೊಳಿಸಿದೆ.

—ಸಮುದ್ರವಳ್ಳಿ ವಾಸು

## ಸ್ಲೀಪ್ ವೆಲ್

ಸ್ಲೀಪ್ ವೆಲ್ (ಉಮಾ ಅನಂತ್, ಫೆ. 10) ಲೇಖನ ಓದಿದೆ. ನಿದ್ದೆ ಬಲ್ಲವನಿಗೆ ರೋಗವಿಲ್ಲ ನಿಜ; ಕೆಲವೊಮ್ಮೆ ಅದು 'ದೀರ್ಘನಿದ್ರೆ'ಯೂ ಆಗಬಹುದು! (ಸಮಸ್ಯೆಯೇ ಇಲ್ಲ). ಮದ್ದೇಕೆ ನಿದ್ದೆಗೆ?

—ಸಿಪಿಕೆ, ಮೈಸೂರು

ನಿದ್ದೆ ಎಂದರೆ ಬರಿಯ ಆಯಾಸ ಪರಿಹಾರ ಎಂದು ತಿಳಿದಿದ್ದ ನಮಗೆ ಅತೀ ನಿದ್ದೆಯೂ ಅನಾರೋಗ್ಯಕ್ಕೆ ಮುನ್ಸೂಚನೆ ಎಂಬ ಸತ್ಯ ಈ ಲೇಖನದಿಂದ ತಿಳಿಯಿತು. ನಿದ್ದೆ ಬರುವುದಕ್ಕೆ ಮದ್ದಿನ ರೂಪದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತದ ಹಲವು ರಾಗಗಳು ಕೆಲಸ ಮಾಡುತ್ತವೆ ಎಂದು ತಿಳಿಯಿತು. ನಿದ್ರೆ ಎಂದರೆ ಕುಂಭಕರ್ಣನಿಗೆ ಹೋಲಿಕೆ ನೀಡುತ್ತಿದ್ದೆವು. ನಿದ್ರೆಯಲ್ಲಿ ಹಲವಾರು ವಿಧಗಳಿವೆ ಎಂದು ತಿಳಿದುಕೊಂಡೆವು.

—ಎಂ. ಎಸ್. ಉಷಾ ಪ್ರಕಾಶ್, ಮೈಸೂರು



## ಲವ್ ಸ್ಟೋರಿ

'ಲವ್ ಸ್ಟೋರಿ' (ಪ್ರೇಮಲತ ಬಿ. ಫೆ. 10) ಲೇಖನದಲ್ಲಿ ಪ್ರೀತಿಯ ನಾನಾ ಮುಖಗಳನ್ನು ಪ್ರಸ್ತಾಪಿಸಿದ್ದಾರೆ. ನಮ್ಮ ಬದುಕಿನೆಲ್ಲ ಕ್ಷೇತ್ರಗಳು ಪ್ರೀತಿಯ ಅನಾವರಣದ ಘನತೆಯಿಂದಲೇ ಆರಂಭಗೊಳ್ಳುತ್ತವೆಂಬುದನ್ನು ವಿದೇಶಗಳ ವಿಚಾರವನ್ನು ಲೇಖಿಸುತ್ತಾ ಉತ್ತಮ ಶೈಲಿಯಲ್ಲಿ ನಿರೂಪಿಸಿದ್ದಾರೆ. ನಿಜವಾದ ಪ್ರೇಮಕ್ಕೆ ಗೌರವಾದರಗಳೇ ಅಡಿಗಲ್ಲಲ್ಲವೆ? ಪ್ರೀತಿಯನ್ನು ಪ್ರೀತಿಯಿಂದಲೇ ಗೆಲ್ಲಬೇಕು. ಈ ಲೇಖನದ ನಡುವೆ ಹಿರಿಯ ಪ್ರಸಿದ್ಧ ಕವಿಗಳ ಪ್ರೇಮದ ಕುರಿತ ಪದ್ಯದ ಸಾಲುಗಳ ಬಳಕೆಯು ಅರ್ಥಪೂರ್ಣವಾಗಿದೆ.

—ಸುಶೀಲಾ ಸೋಮಶೇಖರ್, ಹಾಸನ

ಪ್ರೇಮದ ಕುರಿತಾದ ಲೇಖನ ತುಂಬ ಚೆನ್ನಾಗಿತ್ತು. ಅಷ್ಟೇ ಅರ್ಥಪೂರ್ಣವೂ ಆಗಿತ್ತು. ಭಿನ್ನವಾದ ಮಾಹಿತಿಗಳನ್ನೊಳಗೊಂಡಿದ್ದ ಲೇಖನ ಪ್ರಕಟಿಸಿದ್ದಕ್ಕೆ 'ಸುಧಾ'ಗೆ ಅಭಿನಂದನೆಗಳು.

—ಮಹೇಶ್ ಹಿರೆಂಡಗಿ

## ಗುಡ್ಡದ ಜೀವ...



'ಗುಡ್ಡದ ಜೀವಕ್ಕೆ ಪದ್ಮಶ್ರೀ ಬಾಗಿನ' (ನಾ. ಕಾರಂತ ಪೆರಾಜೆ, ಫೆ. 17) ಲೇಖನ ತುಂಬ ಚೆನ್ನಾಗಿದೆ. ಬೋಳು ಗುಡ್ಡದಲ್ಲಿ ಮಹಾಲಿಂಗ ನಾಯ್ಕರು ಆತ್ಮವಿಶ್ವಾಸದಿಂದ ತಮ್ಮ ಕನಸನ್ನೆಲ್ಲಾ ಸಾಕಾರಗೊಳಿಸಿ, ಎಲ್ಲರಿಗೂ ಮಾದರಿಯಾಗಿದ್ದಾರೆ. ಪದ್ಮಶ್ರೀ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಇದು ಎಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

ಮಹಾಲಿಂಗ ನಾಯ್ಕರ ಅಸಾಮಾನ್ಯ ಸಾಧನೆ ಬಗ್ಗೆ ತಿಳಿದು ಹೆಮ್ಮೆ ಆಯಿತು. ಸುಮಾರು ಮೂರೂವರೆ ವರ್ಷಗಳ ಹಿಂದೆ ನಾನು ಕುಮಟಾ ತಾಲ್ಲೂಕಿನ ತಹಸೀಲ್ದಾರನಾಗಿ ಸೇವೆ ಸಲ್ಲಿಸುತ್ತಿರುವಾಗ ತಾಲ್ಲೂಕಿನ ಕೂಜಳಿವೆಂಬ ಊರಿನಲ್ಲಿ ಸುಬ್ರಾಯ ಹೆಗಡೆ ಎಂಬ ಕೃಷಿಕರು ಸಹ ತಮ್ಮ ತೋಟದಲ್ಲಿ ಸುಮಾರು ನೂರಾರು ಅಡಿಗಳ ಅಂತರದ ಸುರಂಗವನ್ನು ಕೊರೆದು ನೀರು ಹಾಯಿಸಿ ತಾಲ್ಲೂಕಿನ ಭಗೀರಥರಾಗಿದ್ದರು. ಅವರ ಈ ಮಹಾನ್ ಕಾರ್ಯಕ್ಕೆ ತಾಲ್ಲೂಕು ಮಟ್ಟದಲ್ಲಿ ಪ್ರಶಸ್ತಿನೀಡಿ ಗೌರವಿಸಲಾಗಿತ್ತು.

—ಎಸ್.ವಿ. ನಾಯ್ಕ ರಾಣೆ, ಧಾರವಾಡ

ಮಹಾಲಿಂಗ ನಾಯ್ಕರು ಓದು ಬರಹ ಬಾರದೇ ಇದ್ದರೂ, ಕಾಂಚಾಣವಿಲ್ಲವೆಂದು ಕೊರಗದೇ ಅವರಿಗಿದ್ದ ಸಾಮಾಜಿಕ ಪ್ರಜ್ಞೆಯಿಂದ ಗುಡ್ಡ ಕೊರೆದು ನೀರು ತರಿಸಿ ಬೋಳುಗುಡ್ಡವನ್ನು ಹಸಿರು ಮಾಡಿದರು. ದುಡ್ಡನ್ನೇ ಅಗೆದು ದೊಡ್ಡ ದೊಡ್ಡ ಅಣೆಕಟ್ಟು ಕಟ್ಟುವುದರ ಹಿಂದೆ ಬಿದ್ದಿರುವ ವ್ಯವಸ್ಥೆಗೆ, ವಿದ್ಯೆ ಕಲಿತ ಬುದ್ಧಿವಂತರಿಗೆ, ಅವರ ಸಾಧನೆ ಅರಿವನ್ನು ಹುಟ್ಟಿಸುವಂತಾಗಬೇಕು.

—ಜಿ. ಬೈರೇಗೌಡ, ಬೆಂಗಳೂರು

ಸಾಧನೆ ಮಾಡಲು ಬೇಕಾಗಿರುವುದು ಒಂದೇ ಒತ್ತಾಸೆ; ಸಾಧಿಸಬೇಕೆಂಬ ಇಚ್ಛಾಶಕ್ತಿ. ಕುದ್ದುಪದವಿನ ಮಹಾಲಿಂಗ ನಾಯ್ಕರು ಇದಕ್ಕೆ ಉದಾಹರಣೆಯಾಗಿದ್ದಾರೆ. ನಾಯ್ಕರ ಛಲ, ದೂರದೃಷ್ಟಿ ಇದ್ದರೆ ಬರಿಗೈ ಬಂಟರು ಸಹಾ ಮಹಾನ್ ಸಾಧನೆ ಮಾಡಬಹುದು.

—ರಾಮಚಂದ್ರ, ಮಾರಳ್ಳಿ

'ಹಣೆಬರಹವೇ ಸರಿಯಿಲ್ಲ, ವ್ಯವಸ್ಥೆಯೇ ಭ್ರಷ್ಟಾಚಾರದಿಂದ ತುಂಬಿದೆ' ಎಂದೆಲ್ಲಾ ಗೊಣಗುವವರ ನಡುವೆ ಇಳಿಜಾರು ಗುಡ್ಡವನ್ನು ನಂದನವಾಗಿಸಿ ಪದ್ಮಶ್ರೀ ಪ್ರಶಸ್ತಿಗೆ ಭಾಜನವಾಗಿರುವ ಅಮೈ ಮಹಾಲಿಂಗ ನಾಯ್ಕ ಅವರಿಗೆ ನನ್ನದೊಂದು ಹ್ಯಾಟ್ಸಾಫ್. 'ತಾನು ಸರಿ ಹೋದರೆ ಜಗತ್ತನ್ನು ಸರಿಪಡಿಸುವ ಅಗತ್ಯವಿಲ್ಲ' ಎಂಬ ವಿವೇಕಾನಂದರ ಮಾತಿಗೆ ಮಾದರಿಯಾಗಿದ್ದಾರೆ.

—ಮಲ್ಲಿಕಾರ್ಜುನ ಸುರಧೇನುಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in